ದಿಃ **25.10.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ.ಎಂ.ಸಿ.ಹೆಚ್ ವಕೀಲರಿಂದಃ ಪ್ರತಿವಾದಿಯ ಪರವಾಗಿಃ

**10)** ನಮ್ಮ ಕುಟುಂಬದ ಮೂಲಪುರುಷನಾದ ಗೂಳಪ್ಪ ಈತನ ತಂದೆಯ ಹೆಸರು ಗುಡ್ಡಪ್ಪ ಅಂತಾ ಇರುತ್ತದೆ ಅಂದರೆ ಸರಿ. ಸದರಿ ಗೂಳಪ್ಪ ಈತನಿಗೆ ಮಾರ್ತಾಂಡಪ್ಪ ಎನ್ನುವ ಸಹೋದರ ಇದ್ದ ಅಂದರೆ ಸರಿ. ಗೂಳಪ್ಪ ಈತನಿಗೆ ಗಂಗವ್ವ ಮತ್ತು ಗೌರವ್ವ ಎನ್ನುವ ಇಬ್ಬರೂ ಹೆಣ್ಣುಮಕ್ಕಳು ಇರುತ್ತಾರೆ ಅಂದರೆ ಸರಿ. ನಾನು ಗೌರವ್ವ ಇವರ ಕುಟುಂಬಕ್ಕೆ ದತ್ತಕ ಹೋದ ಮಗ ಅಂದರೆ ಸರಿ. ಗೂಳಪ್ಪ ಮತ್ತು ಆತನ ಸಹೋದರನಾದ ಮಾರ್ತಾಂಡಪ್ಪ ಇಬ್ಬರ ಮಧ್ಯ ಅವರ ಕುಟುಂಬದ ಆಸ್ತಿಗಳಲ್ಲಿ ಪಾಲು ವಾಟ್ನಿಯಾಗಿರುತ್ತದೆ ಅಂದರೆ ಸರಿ. ಸದರಿ ಪಾಲು ವಾಟ್ನಿಯ ಪ್ರಕಾರ ದಾವಾ ಅಸ್ತಿಯ ರಿ.ಸ.ನಂಬರಃ 94/2 ಇದರಲ್ಲಿ 07 ಎಕರೆ ಆಸ್ತಿ ಗೂಳಪ್ಪನ ಪಾಲಿಗೆ ಬಂದಿರುತ್ತದೆ ಅಂದರೆ ಸರಿ. ಅದೇ ರೀತಿ ಸರ್ವೆ ನಂಬರಃ 94/2 ಇದರ ಒಟ್ಟು ವಿಸ್ತೀರ್ಣ 07 ಎಕರೆ 27 ಗುಂಟೆಯಷ್ಟು ಆಸ್ತಿಯೂ ಮಾರ್ತಾಂಡಪ್ಪ ಹೆಸರಿನಲ್ಲಿ ಪಾಲುವಾಟ್ನಿಯಾಗಿ ಆತನಿಗೆ ಕೊಡಲಾಗಿತ್ತು ಅಂದರೆ ಸರಿಯಲ್ಲ. ಮೇಲೆ ಹೇಳಿದ ಎರಡು ಆಸ್ತಿಯೂ ಹಾವೇರಿ ಜಿಲ್ಲೆಯ ಕಂಚಾರಗಟ್ಟಿ ಹದ್ದಿನಲ್ಲಿ ಬರುತ್ತವೆ ಅಂದರೆ ಸರಿ.

**11)** ಅದೇ ರೀತಿ ರಿ.ಸ.ನಂಬರಃ 27/2 ಬ ಇದರ ವಿಸಿಐರ್ಣ 05 ಎಕರೆ 15 ಗುಂಟೆ ಆಸ್ತಿಯು ಗೂಳಪ್ಪನ ಪಾಲಿಗೆ ಬಂದಿರುತ್ತದೆ ಅಂದರೆ ಸರಿ. ಅದೇ ರೀತಿ ರಿ.ಸ.ನಂಬರಃ 28/1 ಬ ಇದರ ವಿಸ್ತೀರ್ಣ 03 ಎಕರೆ 36 ಗುಂಟೆಯಷ್ಟು ಆಸ್ತಿಯು ಮಾರ್ತಾಂಡಪ್ಪನಿಗೆ ಬಂದಿರುತ್ತದೆ ಅಂದರೆ ಸರಿ. ಗೂಳಪ್ಪ ಈತನ ಪಾಲಿಗೆ ಬಂದಂತಹ ರಿ.ಸ.ನಂಬರಃ 27/2 ಬ ಇದರ ವಿಸ್ತೀರ್ಣ 05 ಎಕರೆ 15 ಗುಂಟೆ ಆಸ್ತಿಯು ನಮಗೆ ಸೇರಿದ್ದಾಗಿರುತ್ತದೆ ಮತ್ತು ನಮ್ಮ ಹೆಸರಿನಲ್ಲಿ ಇರುತ್ತದೆ ಅಂದರೆ ಸರಿ. ಸದರಿ ರಿ.ಸ.ನಂಬರಃ 27/2 ಬ 05 ಎಕರೆ 15 ಗುಂಟೆಯಷ್ಟು ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿ. ಸದರಿ ರಿ.ಸ.ನಂಬರಃ 28/1 ಬ 03 ಎಕರೆ 36 ಗುಂಟೆ ಪ್ರಸ್ತುತವಾಗಿ ನಮ್ಮ ಹೆಸರಿನಲ್ಲಿ ಇದೆ ಅಂದರೆ ಸರಿ. ಸದರಿ ಸರ್ವೆ ನಂಬರ 28/1 ಬ 03 ಎಕರೆ 36 ಗುಂಟೆಯಷ್ಟು ಆಸ್ತಿಯನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ ಅಂದರೆ ಸರಿ.

**12)** ರಿ.ಸ.ನಂಬರಃ 27/2 ಬ 05 ಎಕರೆ 18 ಗುಂಟೆಯಷ್ಟು ಆಸ್ತಿಯು ನಮ್ಮ ಹಿಸ್ಸೇಗೆ ಬಂದಿರುತ್ತದೆ ಅಂದರೆ ಸರಿ. ರಿ.ಸ.ನಂಬರಃ 97/1 ಕ ಈ ಆಸ್ತಿಯ 07 ಎಕರೆ ಜಮೀನಿನಲ್ಲಿ ಗಂಗವ್ವ ಮರಡಿ ಈಕೆಯ ಹೆಸರಿನಲ್ಲಿ 03 ಎಕರೆ ಪಾಲನ್ನು ಕೊಡಲಾಗಿರುತ್ತದೆ ಅಂದರೆ ಸರಿ. ಸದರಿ ಸರ್ವೆ ನಂಬರಃ 91/1 ಕ ಇದರಲ್ಲಿಯ ಉಳಿಕೆಯ ಆಸ್ತಿಯಾದ 04 ಎಕರೆ 1 ನೇ ಪ್ರತಿವಾದಿಯಾದಂತಹ ಗಂಗವ್ವ ಈಕೆಗೆ ಬಂದಿರುತ್ತದೆ ಮತ್ತು ಉಳಿಕೆಯ ಆಸ್ತಿಯಾದ 03 ಎಕರೆ ನನ್ನ ಪಾಲಿಗೆ ಬಂದಿರುತ್ತದೆ ಅಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಅವಕಾಶ ಕೇಳಲಾಗಿ ಅವಕಾಶ ಕೊಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.